ದಿನಾಂಕಃ 06/02/2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂ. ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ವಾಯ್ ಬಿ ಬಿ ವಕೀಲರಿಂದಃ**

3. ನಮ್ಮ ಕುಟಂಬದ ಜೀವಿತ ಸದಸ್ಯರ ಧೃಡೀಕೃತ ಪತ್ರ. ನಮ್ಮ ತಂದೆ ಕೃಷ್ಣಪ್ಪ ಅವರ ಮರಣ ಉತಾರ ನನ್ನ ಶಾಲಾ ದಾಖಲೆ ಹಾಜರು ಮಾಡಿ, ಅವನ್ನು ಗುರುತಿಸುತ್ತೇನೆ.(ಸಾಕ್ಷಿ ಗುರುತಿಸಿದ ಜಿವೀತ ಸದಸ್ಯರ ಧೃಡೀಕೃತ ಪತ್ರ, ಮರಣ ಉತಾರ ಮತ್ತು ಶಾಲಾ ದಾಖಲೆಗಳನ್ನು ಕ್ರಮವಾಗಿ ನಿಪಿ.8 ರಿಂದ 10 ಎಂದು ಗುರುತಿಸಲಾಯಿತು.) ನನ್ನ ಮತ್ತು ನನ್ನ ಮಗಳ ಮೂಲ ಮತ್ತು ದೃಢೀಕೃತ ಆಧಾರ ಕಾರ್ಡು ಹಾಜರು ಮಾಡಿ ಅವನ್ನು ಗುರುತಿಸುತ್ತೇನೆ. ( ಸಾಕ್ಷಿ ಮೂಲ ದಾಖಲೆಗಳು ತಮ್ಮ ದೈನಂದಿನ ಕೆಲಸಗಳಿಗೆ ಅವಶ್ಯಕತೆ ಇರುವುದರಿಂದ ಹಿಂತಿರುಗಿಸುವಂತೆ ಕೋರಿರುತ್ತಾರೆ. ಮೂಲ ದಾಖಲೆಗಳನ್ನು ದೃಢೀಕೃತ ದಾಖಲೆಗಳಿಗೆ ತಾಳೆ ಮಾಡಿ, ನೋಡಲಾಗಿ ಸರಿ ಇರುತ್ತದೆ. ಆದ್ದರಿಂದ ಮೂಲ ದಾಖಲೆಗಳನ್ನು ಹಿಂತಿರುಗಿಸಿ ದೃಢೀಕೃತ ಆಧಾರ ಕಾರ್ಡನ್ನು ನಿಪಿಃ11 ಎಂದು ಗುರುತಿಸಲಾಯಿತು.) ನನ್ನ ಹೆಸರು ಮದುವೆಯ ಪೂರ್ವದಲ್ಲಿ ಜಯವ್ವ ತಂದೆ ಕೃಷ್ಣಪ್ಪ ಘೋರ್ಪಡೆ ಎಂದು ಕರೆಯುತ್ತಿದ್ದರು.

**ಪಾಟೀ ಸವಾಲುಃ** (ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರು ವಿಚಾರಣೆ** ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತಲೇಖನಕ್ಕೆ ದಿಃ 06-02-2023 ರಂದು ಮಧ್ಯಾಹ್ನ 12ಃ46 ರಿಂದ 12ಃ52 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ

ಸಹಿ ಆಗಿದೆ

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ